## ನಿಯಮಾವಳಿಗಳು

1. ಪ್ರತಿಯೊಬ್ಬ ವಿದ್ಯಾರ್ಥಿಯು ಶಿಸ್ತು ಸ್ವಚ್ಛತೆ ಮತ್ತು ಸದ್ವರ್ತನೆಯಿಂದ ಇರಬೇಕು.
2. ಪ್ರತಿಯೊಬ್ಬ ವಿದ್ಯಾರ್ಥಿಯು ಆಡಳಿತ ಮಂಡಳಿಯ ಹಾಗೂ ಮೇಲ್ವಿಚಾರಕರಿಗೆ ವಿದೇಯಕನಾಗಿರಬೇಕು.
3. ಶ್ರೀಮಠಕ್ಕೆ ಸಂಬಂಧಿಸಿದ ಯಾವುದೇ ರೀತಿಯ ಕಾರ್ಯಗಳಿಗೆ ಸೇವೆ ಸಲ್ಲಿಸಲು ಸದಾ ಸಿದ್ದನಾಗಿರಬೇಕು.
4. ಎಲ್ಲಾ ವಿದ್ಯಾರ್ಥಿಗಳು ಸಾಂಸ್ಕೃತಿಕ ಹಾಗೂ ಸಾಮೂಹಿಕ ಪ್ರಾರ್ಥನೆಯಲ್ಲಿ ಸಮವಸ್ತ್ರಗಳೊಂದಿಗೆ ತಪ್ಪದೇ ಭಾಗವಹಿಸಬೇಕು.
5. ತಾವು ವಾಸಿಸುವ ಕೊಠಡಿಯಲ್ಲಿ ಇತರ ವಿದ್ಯಾರ್ಥಿಗಳೊಂದಿಗೆ ಸೌಹಾರ್ದತೆಯಿಂದ ಇದ್ದು ಕೊಠಡಿಯ ಶಾಂತತೆಯನ್ನು ಕಾಯ್ದುಕೊಳ್ಳಬೇಕು.
6. ಊರಿಗೆ ಹೋಗ ಬಯಸುವ ವಿದ್ಯಾರ್ಥಿಗಳು ಒಂದು ದಿವಸ ಮುಂಚಿತವಾಗಿ ಕಾರ್ಯದರ್ಶಿಗಳಿಂದ ಲಿಖಿತ ಅರ್ಜಿ ಸಲ್ಲಿಸಿ ಪರವಾನಗೆ ಪಡೆದುಕೊಳ್ಳತಕ್ಕದ್ದು. ಹಾಗೂ ಮರಳಿ ಬಂದ ನಂತರ ಕಾರ್ಯದರ್ಶಿಗಳಿಗೆ ವರದಿ ಮಾಡಿಕೊಳ್ಳಬೇಕು.
7. ಪ್ರಸಾದ ನಿಲಯದ ಆಡಳಿತ ಮಂಡಳಿಯವರು ನಿರ್ಧರಿಸಿದ ಸಮವಸ್ತ್ರಗಳನ್ನು ಕಡ್ಡಾಯವಾಗಿ ಧರಿಸಬೇಕು.
8. ಸಂಸ್ಥೆಯ ಸಾಮಗ್ರಿ, ಆಸ್ತಿಗಳಿಗೆ ಹಾನಿಯಾಗದಂತೆ ನೋಡಿಕೊಳ್ಳಬೇಕು. ಒಂದು ವೇಳೆ ಹಾನಿ ಮಾಡಿದ್ದಾದಲಿ ಆ ಹಾನಿಯನ್ನು ತುಂಬಿಕೊಡತಕ್ಕದ್ದು.
9. ಯಾವುದೇ ಕಾರಣದಿಂದ ವಿದ್ಯಾರ್ಥಿಯು ಪ್ರಸಾದ ನಿಲಯವನ್ನು ಮಧ್ಯದಲ್ಲಿ ಬಿಟ್ಟು ಹೋದಲ್ಲಿ ತುಂಬಿದ ಯಾವುದೇ ಶುಲ್ಕವನ್ನು ಮರಳಿ ಕೊಡಲಾಗುವುದಿಲ್ಲ.
10. ಶ್ರೀಮಠದ ಪ್ರಸಾದ ನಿಲಯದಲ್ಲಿ ಪ್ರವೇಶ ಪಡೆದವರಿಗೆ ಮಾತ್ರ ಪ್ರಸಾದ ನೀಡಲಾಗುವುದು.
11. ಯಾವುದೇ ವಿದ್ಯಾರ್ಥಿ ಪ್ರಸಾದ ನಿಲಯದಲ್ಲಾಗಲಿ ಅಥವಾ ಹೊರಗಡೆಯಲ್ಲಾಗಲಿ ದುರ್ನಡತೆ ಕಂಡು ಬಂದಲ್ಲಿ ಶಿಸ್ತಿನ ಭಂಗವೆಂದು ಪರಿಗಣಿಸಿ, ಅಂತಹ ವಿದ್ಯಾರ್ಥಿಯ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವದು.

## ಹೆಚ್ಚಿನ ಮಾಹಿತಿಗಾಗಿ:

ಕಾರ್ಯದರ್ಶಿಗಳು : ಶ್ರೀ ಗವಿಸಿದ್ಧೇಶ್ವರ ಉಚಿತ ವಸತಿ ಹಾಗೂ ಪ್ರಸಾದ ನಿಲಯ
ಗವಿಸಿದ್ಧೇಶ್ವರ ಮಠ, ಕೊಪ್ಪಳ. ಮೋ: 93416 05498

**ದೇಣಿಗೆ ಸಲ್ಲಿಸುವ ಬ್ಯಾಂಕಿನ ಹೆಸರು:**
ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕೊಪ್ಪಳ.
ಖಾತೆ ನಂಬರ್: 62425527262 IFSC Code: SBIN0020206.



ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ-583231

ದೂ: 08539-220212 | www.gavimathkoppal.com | srigavimathkoppal@gmail.com

**ಶ್ರೀ ಶಿವಶಾಂತವೀರ ಮಹಾಸ್ವಾಮೀಜಿ ಚಾರಿಟಬಲ್ ಟ್ರಸ್ಟ್**

# ಶ್ರೀ ಗವಿಸಿದ್ಧೇಶ್ವರ 2000 ವಿದ್ಯಾರ್ಥಿಗಳ ಉಚಿತ ವಸತಿ ಹಾಗೂ ಪ್ರಸಾದ ನಿಲಯ









ಸಂಸ್ಥಾನ ಶ್ರೀಗವಿಮಠ, ಕೊಪ್ಪಳ

**Sri Gavisiddheshwar Samsthan Sri Gavimath**
Koppala - 583 231, Karnataka



## ಶ್ರೀ ಗವಿಮಠ ಕಿರುಪರಿಚಯ

ಹೈದ್ರಾಬಾದ ಕರ್ನಾಟಕ ಪ್ರದೇಶದ ಪ್ರತಿಷ್ಠಿತ ನಗರ ಕೊಪ್ಪಳ. ಇತಿಹಾಸ ಪೂರ್ವಕಾಲದ ಅವಶೇಷಗಳು ಶಿಲಾ – ಶಾಸನಗಳು ಗುಡ್ಡ – ಬೆಟ್ಟಗಳು ಕೋಟೆ – ಕೊತ್ತಲಗಳು ಈ ನಾಡಿನ ಭವ್ಯ ಇತಿಹಾಸ ಪರಂಪರೆಗೆ ಸಾಕ್ಷಿಯಾಗಿವೆ. ನಗರದ ಪೂರ್ವ ಬೆಟ್ಟದ ಮಡಿಲಲ್ಲಿ ಬೆಳಗುವ ಗವಿಮಠ ಆಧ್ಯಾತ್ಮ ತಾಣ, ಪೂಜ್ಯರ ತಪೋಬಲ, ತ್ರಿವಿಧ ದಾಸೋಹದ ಪುಣ್ಯಕ್ಷೇತ್ರ ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಗವಿಮಠ ಈಗಾಗಲೇ ಹದಿನೆಂಟು ಪೀಠಾಧಿಪತಿಗಳನ್ನು ಹೊಂದಿದ ಹೆಗ್ಗಳಿಕೆಗೆ ಪಾತ್ರವಾಗಿದೆ. ಶ್ರೀಮಠದ ಎಲ್ಲ ಶಿವಯೋಗಿಗಳು ಅನ್ನ–ಅಕ್ಷರ ಹಾಗೂ ಆಧ್ಯಾತ್ಮ ದಾಸೋಹದ ಮೂಲಕ ಈ ನಾಡನ್ನು – ನಾಡವರನ್ನೂ ಉದ್ಧರಿಸಿದ್ದಾರೆ. ಹಾಗೆಯೇ ಶಿಕ್ಷಣ ದಾಸೋಹವನ್ನು ನಿತ್ಯ ನಿರಂತರಗೊಳಿಸಿದ್ದಾರೆ.

- **ಮಹಾಮಹಿಮ ಗವಿಸಿದ್ಧೇಶ** : ಜ॥ ಗವಿಸಿದ್ಧೇಶ್ವರರು ಶ್ರೀಮಠದ 11ನೇಯ ಪೀಠಾಧಿಪತಿಗಳು. ಕೊಪ್ಪಳದ ನೆರೆಯ ಮಂಗಳಾಪೂರದಲ್ಲಿ ಜನಿಸಿ ಮಳೆಮಲ್ಲೇಶನಲ್ಲಿ ತಪೋನುಷ್ಠಾನಗೈದು ಗವಿಮಠಕ್ಕೆ ಆಗಮಿಸಿದರು 10ನೇಯ ಪೀಠಾಧಿಪತಿಗಳಾಗಿದ್ದ ಜ॥ ಚನ್ನಬಸವ ಶಿವಯೋಗಿಗಳ ಪ್ರಿತ್ಯಾದರಗಳಿಗೆ ಪಾತ್ರರಾಗಿ "ಗವಿಸಿದ್ಧೇಶ" ನೆಂಬ ಅಭಿಧಾನದಿಂದ ಶ್ರೀಮಠದ ಪೀಠಾಧಿಪತಿಗಳಾದರು. ಹೈದ್ರಾಬಾದ ನವಾಬನ ಕುಷ್ಠರೋಗವನು ಕಳೆದುದಕ್ಕಾಗಿ, ಶ್ರೀಮಠಕ್ಕೆ ನವಾಬ 1300 ಎಕರೆ ಜಮೀನು ಉಂಬಳಿಯಾಗಿ ಕೊಟ್ಟ ದತ್ತಿ ಪತ್ರ ಉಲ್ಲೇಖನಿಯವಾಗಿದೆ. ಗುರುಗಳಿಗಾಗಿಯೇ ನಿರ್ಮಿಸಿದ ಸಮಾಧಿಯನ್ನು ತಾವೇ ಪ್ರವೇಶಿಸಿ ನಿರ್ವಿಕಲ್ಪ ಸಮಾಧಿಸ್ತರಾಗಿ ಗುರುಗಳಿಂದಲೆ ಗೌರವಿಸಿಕೊಂಡ ಯತಿರೇಣ್ಯರು ಗವಿಸಿದ್ಧೇಶ್ವರರು.
- **ಶ್ರೀ ಮರಿಶಾಂತವೀರ ಶಿವಯೋಗಿಗಳು** : ಶ್ರೀಮಠದ 16ನೇಯ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಮರಿಶಾಂತವೀರ ಶಿವಯೋಗಿಗಳುವರು ಸ್ವತಃ ವಿದ್ವಾಂಸರು, ಶಿಕ್ಷಣ ಪ್ರೇಮಿಗಳು ಆಗಿದ್ದ ಶಿವಯೋಗಿಗಳು ಸಾಹಿತ್ಯ, ತತ್ವಜ್ಞಾನ, ತರ್ಕಶಾಸ್ತ್ರ ಹಾಗೂ ಆಯುರ್ವೇದದಲ್ಲಿ ಅಪಾರ ಪಾಂಡಿತ್ಯ ಹೊಂದಿದವರಾಗಿದ್ದರು ಅಸಹಾಯಕ ಬಡ ಮಕ್ಕಳಿಗೆ ಶಿಕ್ಷಣದ ಅವಕಾಶ ಕಲ್ಪಿಸಿಕೊಡುವುದು ಗವೀಶನ ಆರಾಧನೆಗೆ ಸಮವೆಂದೆ ನಂಬಿದ್ದ ಪೂಜ್ಯರು 1951ರಲ್ಲಿ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಶಿಕ್ಷಣ ಪ್ರಸಾರದಂತ ವ್ಯಾಪಕಗೊಳ್ಳಬೇಕೆಂಬ ಸದುದ್ದೇಶದಿಂದ ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕ ಟ್ರಸ್ಟನ್ನು ಸ್ಥಾಪಿಸಿ ಶ್ರೀಮಠದ ಭೂ ಆಸ್ತಿಯನ್ನೆಲ್ಲ ಸಂಸ್ಥೆಗೆ ದಾನ ನೀಡಿ ಶಿಕ್ಷಣ ದಾಸೋಹ ನಿತ್ಯ ನಿರಂತಗೊಳ್ಳಲು ಅವಕಾಶ ಕಲ್ಪಸಿಕೊಟ್ಟ ಶಿಕ್ಷಣ ಪ್ರೇಮಿ ಮರಿಶಾಂತವೀರ ಶಿವಯೋಗಿಗಳು ನಿಜಕ್ಕೂ ಪ್ರಾತಃಸ್ಮರಣೀಯರು.
- **ಶ್ರೀ ಶಿವಶಾಂತವೀರ ಶಿವಯೋಗಿಗಳು** : ಶ್ರೀಮಠದ 17ನೇಯ ಪೀಠಾಧಿಪತಿಗಳು ಶ್ರೀಮಠದ ಘನತೆಗೆ ಕಳಶಪ್ರಾಯರಾಗಿ ಬೆಳೆದವರು. ತಪೋಬಲ, ವಿದ್ವತ್ತು,ವಿನಯ, ಅಂತಃಕರುಣೆ, ಭಕ್ತೋದ್ಧಾರಕ್ಕಾಗಿ ಅವಿರತ ಸೇವೆಯಿಂದಾಗಿ ನಡೆದಾಡುವ ದೇವರೆಂದೇ ಭಕ್ತರ ಹೃನ್ಮಂದಿರದಲ್ಲಿ ಚಿರಸ್ಥಾಯಿಗೊಂಡವರು ಸಂಸ್ಕೃತ–ಆಯುರ್ವೇದದಲ್ಲಿ ಅಪಾರ ಪಾಂಡಿತ್ಯದ ಪೂಜ್ಯರು ಆಯುರ್ವೇದ ಪದ್ಧತಿಯ ಪುನರುಜ್ಜೀವನ ಹಾಗೂ ಬಡ ಜನತೆಗೆ ಉಚಿತ ಆರೋಗ್ಯ ವ್ಯವಸ್ಥೆಯ ಉದ್ದೇಶದಿಂದಾಗಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯವನ್ನು ಆರಂಭಿಸಿದರು.
- **ಶ್ರೀ ಗವಿಸಿದ್ಧೇಶ್ವರ ಶಿವಯೋಗಿಗಳು** ಇಂದಿನ 18ನೆಯ ಪೀಠಾಧಿಪತಿಗಳಾದ ಜ॥ ಗವಿಸಿದ್ಧೇಶ್ವರ ಶಿವಯೋಗಿಗಳವರು ವಾಗ್ಮೀಗಳು ವಿದ್ಯಾವಂತರು ಹಾಗೂ ವಿದ್ಯಾ ಪ್ರೇಮಿಗಳೂ ಆಗಿದ್ದಾರೆ. ಪೂರ್ವದ ಸತ್ಯ ಸಂಕಲ್ಪಗಳನ್ನು ನೆರವೇರಿಸುವದರೊಂದಿಗೆ ನಾವಿನ್ಯತೆಯ ರೂಪು–ರೇಷೆಯನ್ನು ಮೂಡಿಸುವಲ್ಲಿ ನಿರತರಾಗಿದ್ದಾರೆ.

**ಸಂಸ್ಥಾನ ಶ್ರೀ ಗವಿಮಠ, ಕೊಪ್ಪಳ–583231**

ದೂ: 08539–220212 । www.gavimathkoppal.com | srigavimathkoppal@gmail.com



### ಶ್ರೀ ಶಿವಶಾಂತವೀರ ಮಹಾಸ್ವಾಮೀಜಿ ಚಾರಿಟಬಲ್ ಟ್ರಸ್ಟ್

### ಶ್ರೀ ಗವಿಸಿದ್ಧೇಶ್ವರ 2000 ವಿಧ್ಯಾರ್ಥಿಗಳ ಉಚಿತ ವಸತಿ ಹಾಗೂ ಪ್ರಸಾದ ನಿಲಯ

**"ಹಸಿದವರಿಗೆ ಅನ್ನ ನೀರಡಿಸಿದವರಿಗೆ ನೀರು ಬದುಕಿನಲ್ಲಿ ನಿರಾಸೆಯಾದ ವ್ಯಕ್ತಿಗೆ ನಿನ್ನೊಂದಿಗೆ ನಾನಿದ್ದೇನೆ" ಎನ್ನುವ ಭರವಸೆಯ ನುಡಿ ಇದು ಸಾರ್ಥಕ ಬದುಕಿನ ಲಕ್ಷಣ.**

ಶ್ರೀ ಗವಿಮಠದ ಅನ್ನ–ಅಕ್ಷರ–ಆರೋಗ್ಯ–ಆಧ್ಯಾತ್ಮ ದಾಸೋಹಂಗಳ ಮೂಲಕ ಶ್ರೀ ಗವಿಮಠ, ಪ್ರತೀತವಾಗಿದೆ.

ಶ್ರೀಮಠದ ಪರಂಪರೆಯ ಶಿವಯೋಗಿಗಳೆಲ್ಲವರ ಬದುಕು ಎಡಗೈಯಲ್ಲಿ ಇಷ್ಟಲಿಂಗ, ಬಲಗೈಯಲ್ಲಿ ಭಕ್ತನ ಬದುಕು, ಅವರದು ಭಕ್ತರಿಗಾಗಿ ಬದುಕಿದ ಬದುಕು ಈ ಭಾಗದ ಬಡತನ, ಅನಕ್ಷರತೆಯನ್ನು ಮನಗಂಡು 16ನೇ ಪೀಠಾಧಿಪತಿಗಳಾದ ಪೂಜ್ಯ ಶ್ರೀ ಮರಿಶಾಂತವೀರ ಶಿವಯೋಗಿಗಳವರು ಶ್ರೀ ಗವಿಸಿದ್ಧೇಶ್ವರ ವಿದ್ಯಾವರ್ಧಕ ಟ್ರಸ್ಟನ್ನು ಸಂಸ್ಥಾಪಿಸಿ ತನ್ಮೂಲಕ ವಿದ್ಯಾ ಪ್ರಸರಣದಂತಹ ಮಹಾಕಾಯಕವನ್ನೇ ಕೈಗೊಂಡರು ಜೊತೆಗೆ ಉಚಿತ ವಸತಿ ಹಾಗೂ ಪ್ರಸಾದ ನಿಲಯವನ್ನು ಪ್ರಾರಂಭಿಸಿ ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಮನ್ವಂತರವನ್ನೇ ಆರಂಭಿಸಿದರು. ಪೂಜ್ಯರು ಪ್ರಾರಂಬಿಸಿದ ಉಚಿತ ವಸತಿ ಹಾಗೂ ಪ್ರಸಾದ ನಿಲಯವೆಂಬ ಸಸಿ ಇಂದು ಮಹಾನ್ ವಟು ವೃಕ್ಷವಾಗಿ ಬೆಳೆದಿದೆ. ಕೇವಲ ಕೆಲವೇ ವಿದ್ಯಾರ್ಥಿಗಳಿಂದ ಆರಂಭವಾದ ಸಂಸ್ಥೆ ಇಂದು 2000 ವಿದ್ಯಾರ್ಥಿಗಳ ಬದುಕಿಗೆ ವಸತಿ ಸ್ಥಾನವಾಗಿದೆ. ಸುಸಜ್ಜಿತ ಗ್ರಂಥಾಲಯ ಸಹಸ್ರಾರು ವಿದ್ಯಾರ್ಥಿಗಳು ಏಕಕಾಲಕ್ಕೆ ಕುಳಿತು ಭೋಜನ ಸ್ವೀಕರಿಸುವ ವಿಶಾಲ ಭೋಜನಾಲಯ ಮೂಲಸೌಕರ್ಯಗಳ ವ್ಯವಸ್ಥೆ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳಿಗಾಗಿ ವಿಶೇಷ ವ್ಯವಸ್ಥೆ ಹಾಗೂ ಒಬ್ಬ ವಿದ್ಯಾರ್ಥಿ ಇಲ್ಲಿ ಪ್ರವೇಶ ಪಡೆದ ತರುವಾಯ ಆ ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿಯನ್ನು ಕೈಗೊಳ್ಳುವ ಜೊತೆಗೆ ನಾಡಿನ ಮಹೋನ್ನತ ಆಸ್ತಿಯಾಗಬೇಕೆಂಬುದೇ ನಮ್ಮದುಹಾಸೆಯಾಗಿದೆ.

### 2017–18 ಸಾಲಿನಲ್ಲಿ ತರಗತಿವಾರು ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ

| ಕ್ರ.ಸಂ | ತರಗತಿ | ವಿದ್ಯಾರ್ಥಿಗಳ ಸಂಖ್ಯೆ | ಕ್ರ.ಸಂ | ತರಗತಿ | ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|
| 1 | 5ನೇ ತರಗತಿ | 108 | 7 | ಪಿಯುಸಿ | 406 |
| 2 | 6ನೇ ತರಗತಿ | 248 | 8 | ಪದವಿ | 75 |
| 3 | 7ನೇ ತರಗತಿ | 261 | 9 | ಇತರೆ | 24 |
| 4 | 8ನೇ ತರಗತಿ | 286 | | | |
| 5 | 9ನೇ ತರಗತಿ | 271 | | | |
| 6 | 10ನೇ ತರಗತಿ | 105 | | | |

**ಸಂಸ್ಥಾನ ಶ್ರೀಗವಿಮಠ, ಕೊಪ್ಪಳ**

**Sri Gavisiddheshwar Samsthan Sri Gavimath**

Koppala - 583 231, Karnataka